**ದಿನಾಂಕ :** 15.07.2022.
**(ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.)**
**ಪಿ ಡಬ್ಲ್ಯೂ - 1**

**<u>ಮುಂದುವರೆದ ಮುಖ್ಯ ವಿಚಾರಣೆ : ಅರ್ಜಿದಾರರ ಪರ ವಕೀಲರಿಂದ :</u>**

ಈ ದಿನ ನಾನು ನನ್ನ ಮುಖ್ಯವಿಚಾರಣೆಯ ಭಾಗವಾಗಿ ನನ್ನ ಪ್ರಮಾಣ ಪತ್ರಯನ್ನು ಈಗಾಗಲೇ ಸಲ್ಲಿಸಿರುತ್ತೇನೆ. ಅದರಲ್ಲಿನ ಅಂಶಗಳು ಸತ್ಯವಾಗಿರುತ್ತವೆ. ನನ್ನ ಪರವಾಗಿ ಈ ಕೆಳಕಂಡ ದಾಖಲಾತಿಗಳನ್ನು ಸಲ್ಲಿಸಿರುತ್ತೇನೆಃ

1. ಇಪಿ 64/18 ರಲ್ಲಿನ ಆರ್ಡರ್ ಶೀಟ್,
2. ಇಪಿ 64/18 ರಲ್ಲಿನ ಪಿಟೀಷನ್,
3. ತಾಃ 06.11.2019 ರಂದು ನಗರಸಭೆ, ರಾಮನಗರ ಇವರಿಗೆ ಸಲ್ಲಿಸಿದ ತಕರಾರು ಅರ್ಜಿ,
4. ತಾಃ 22.11.2019 ರ ಕಾನೂನು ತಿಳುವಳಿಕೆ ಪತ್ರ,
5. ಅಂಚೆ ರಶೀದಿ ಹಾಜರುಪಡಿಸಿದ್ದೇನೆ, ಅವುಗಳನ್ನು ಈಗ ಕ್ರಮವಾಗಿ ನಿಪಿ.1 ರಿಂದ ನಿಪಿ.5 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು :</u>**

**(ಎದುರುದಾರರ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)**
**<u>(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).</u>**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ನಿಂಗಪ್ಪ ಪರಶುರಾಮ ಕೋಪರ್ಡೆ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**

**ದಿನಾಂಕ :** 15.09.2022.
**(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)**
**ಪಿ ಡಬ್ಲ್ಯೂ - 1**

**ಪಾಟೀ ಸವಾಲು : ಎದುರುದಾರರ ಪರ ಶ್ರೀ.ಬಿಪಿಆರ್., ವಕೀಲರಿಂದ :**

2. 2 ನೇ ಎದುರುದಾರ 1 ನೇ ಎದುರದಾರರಿಗೆ ಯಾವ ತಾರೀಖಿನಂದು ಖರೀದಿ ಒಪ್ಪಂದ ಪತ್ರ ಮಾಡಿಕೊಟ್ಟಿದ್ದರು ಎಂದು ಗೊತ್ತಾ ಅಂದರೆ ಗೊತ್ತಿಲ್ಲ. 1 ನೇ ಎದುರುದಾರ 2 ನೇ ಎದುರದಾರರ ವಿರುದ್ಧ ಯಾವಾಗ ದಾವಾ ಮಾಡಿದರು ಎಂದು ಗೊತ್ತಾ ಅಂದರೆ ಗೊತ್ತಿಲ್ಲ. ಆ ದಾವಾ ಮಾಡುವುದಕ್ಕಿಂತ ಮೊದಲು 1 ನೇ ಎದುರುದಾರ 2 ನೇ ಎದುರದಾರರಿಗೆ ಯಾವಾಗ ನೋಟೀಸ್ ನೀಡಿದ್ದರು ಎಂದು ಗೊತ್ತಾ ಅಂದರೆ ಗೊತ್ತಿಲ್ಲ.

3. ಇದೇ ದಾವಾ ಆಸ್ತಿಗೆ ಸಂಬಂಧಿಸಿದಂತೆ ನಾನು 2 ನೇ ಎದುರುದಾರರ ವಿರುದ್ಧ ಒಂದು ದಾವಾ ಮಾಡಿದ್ದೆ ಅಂದರೆ ಸರಿ. 1 ನೇ ಎದುರುದಾರ 2 ನೇ ಎದುರುದಾರರ ವಿರುದ್ಧ ಮಾಡಿದ ದಾವೆ ಅವರ ಪರವಾಗಿ ಡಿಕ್ರಿಯಾಗಿತ್ತು ಅಂದರೆ ನನಗೆ ಗೊತ್ತಿಲ್ಲ.

4. ನಾನು ಮಾಡಿದ ದಾವೆಯಲ್ಲಿ 2 ನೇ ಎದುರುದಾರನಿಗೆ ನೋಟೀಸ್ ಜಾರಿಯಾಗಿತ್ತಾ ಅಂದರೆ ಮಾಡಿಸಿದ್ದೆವು, ಆದರೆ ಅವರು ವಿಳಾಸದಲ್ಲಿರಲಿಲ್ಲ. 1 ನೇ ಎದುರುದಾರ 2 ನೇ ಎದುರದಾರರ ವಿರುದ್ಧ ಮಾಡಿದ ದಾವೆಯಲ್ಲಿ ಡಿಕ್ರಿಯಾದ ನಂತರ ಅವರು ಎಕ್ಸಿಕ್ಯೂಷನ್ ಪಿಟಿಷನ್ ದಾಖಲು ಮಾಡಿದ್ದರು ಅಂದರೆ ನನಗೆ ಗೊತ್ತಿಲ್ಲ. ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು 1 ನೇ ಎದುರುದಾರರು ಈ ಪ್ರಕರಣದ ತಕರಾರಿನಲ್ಲಿ ತಿಳಿಸಿದ್ದಾರೆ ಅಂದರೆ ನನಗೆ ಗೊತ್ತಿಲ್ಲ.

5. 1 ನೇ ಎದುರುದಾರ 2 ನೇ ಎದುರದಾರರ ವಿರುದ್ಧ ಮಾಡಿದ ದಾವೆಯಲ್ಲಿ ಸಮನ್ಸ 2 ನೇ ಎದುರುದಾರರಿಗೆ ಜಾರಿಯಾಗಿದೆ ಅಂದರೆ ನನಗೆ ಗೊತ್ತಿಲ್ಲ. ನನಗೆ ಮಾಡಿಕೊಟ್ಟ ಅಗ್ರಿಮೆಂಟ್ ಮೊದಲಿನದ್ದೋ ಅಥವಾ 2 ನೇ ಎದುರುದಾರರ 1 ನೇ ಎದುರುದಾರರಿಗೆ ಪರವಾಗಿ ಮಾಡಿಕೊಟ್ಟ ಅಗ್ರಿಮೆಂಟ್ ಎಂದು ನನಗೆ ಗೊತ್ತಿಲ್ಲ. 2 ನೇ ಎದುರುದಾರರ 1 ನೇ ಎದುರುದಾರರಿಗೆ ಪರವಾಗಿ

ಮಾಡಿಕೊಟ್ಟ ಅಗ್ರಿಮೆಂಟ್ ಮೊದಲಿನದ್ದು ಎಂದು ನನಗೆ ಗೊತ್ತಿದೆ ಅಂದರೆ ಗೊತ್ತಿಲ್ಲ.

6. ಮಧ್ಯಂತರ ಅರ್ಜಿ - 1ರ ಅಫಿಡವಿಟ್‌ನಲ್ಲಿ ನ್ಯಾಯಾಲಯದ ವಿರುದ್ಧ ಆಕ್ಷೇಪಗಳನ್ನು ಮಾಡಿದ್ದೇನೆ ಅಂದರೆ ಇಲ್ಲ. ನನಗೆ ಕಚೇರಿಯಲ್ಲಿ ಓಡಾಡಿ ವ್ಯವಹಾರಿಕ ಜ್ಞಾನ ಇದೆ ಅಂದರೆ ಸರಿ.

7. ಡಿಗ್ರಿಗೆ ಸಂಬಂಧಪಟ್ಟ ದಾಖಲೆಗಳನ್ನು ಪಡೆಯಲು ಯಾಕೆ ವಿಳಂಬವಾಯಿತು, ಏನು ಕಾರಣ ಇತ್ತು ಎಂದು ಅಫಿಡವಿಟ್‌ನಲ್ಲಿ ತಿಳಿಸಿಲ್ಲ ಅಂದರೆ ನನಗೆ ಗೊತ್ತಿಲ್ಲ. ಈ ಕೇಸಿನಲ್ಲಿ ಯಾವುದೇ ಪರಿಹಾರ ಪಡೆಯಲು ಸಾಧ್ಯವಾಗುವುದಿಲ್ಲ ಎಂದು ಗೊತ್ತಾಗಿದ್ದರಿಂದ ಸುಳ್ಳು ಸಂಗತಿಗಳನ್ನು ಅಫಿಡವಿಟ್‌ನಲ್ಲಿ ಹೇಳಿದ್ದೇನೆ ಅಂದರೆ ಸರಿಯಲ್ಲ.

8. ಧೀರ್ಘಕಾಲಿಕ ವಿಳಂಬವಾಗಿದ್ದರಿಂದ ಅದನ್ನು ಮರೆಮಾಚಲು ನ್ಯಾಯಾಲಯದ ವಿರುದ್ಧ ಸುಳ್ಳು ಆಕ್ಷೇಪಗಳನ್ನು ಪ್ರಮಾಣಪತ್ರದಲ್ಲಿ ತಿಳಿಸಿದ್ದೇನೆ ಅಂದರೆ ಸರಿಯಲ್ಲ.

9. ನಿಪಿ.1 ರಿಂದ 5 ದಾಖಲೆಗಳನ್ನು ಈ ಅಫೀಲು ಮಾಡಿದ ನಂತರ ಪಡೆದುಕೊಂಡಿದ್ದೇನೆ ಅಂದರೆ ನನಗೆ ಗೊತ್ತಾದ ಮೇಲೆ ಈ ದಾಖಲೆಗಳನ್ನು ಪಡೆದುಕೊಂಡಿದ್ದೇನೆ. ನಿಪಿ.1 ರಿಂದ 5 ದಾಖಲೆಗಳನ್ನು ಪಡೆದುಕೊಳ್ಳುವುದಕ್ಕಿಂತ ಮೊದಲು ನಾನು ಸ್ವತಃ ನ್ಯಾಯಾಲಯಕ್ಕೆ ಹೋಗಿ ಸದರಿ ಕಾಫಿಗಳ ಸಲುವಾಗಿ ಅರ್ಜಿ ಹಾಕಿದ್ದೀರಾ ಅಂದರೆ ಇಲ್ಲ. ಆ ರೀತಿ ಅರ್ಜಿ ಹಾಕದೇ ಇದ್ದರೂ ಸಹ ನ್ಯಾಯಾಲಯದ ಮುಂದೆ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

10. ನನ್ನ ಪ್ರಮಾಣಪತ್ರದಲ್ಲಿ ತಿಳಿಸಿರುವ ಸಂಗತಿಗಳು ಸುಳ್ಳು ಅಂದರೆ ಸರಿಯಲ್ಲ.

ಮರುವಿಚಾರಣೆ : ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ನಿಂಗಪ್ಪ ಪರಶುರಾಮ ಕೋಪರ್ಡೆ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**